**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.188/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಅಬಕಾರಿ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿ ಃ 1. ಲಕ್ಷ್ಮೀ ಗಂಡ ರಾಜು ರಾಠೋಡ
ವಃ 30 ವರ್ಷ, ಉಃ ---
ಸಾಃ ಹಾಜಿ ಸರವಾರ ತಾಂಡ ಸೇಡಂ ಶಹರ,
ತಾಃ ಸೇಡಂ, ಜಿಃ ಕಲಬುರಗಿ .

2. ರಾಜು ತಂದೆ ಗುಂಡಪ್ಪ ಉರ್ಪ ಗುಂಡ್ಯಾ ರಾಠೋಢ
ವಃ 35 ವರ್ಷ, ಉಃ--
ಸಾಃ ಹಾಜಿ ಸರವಾರ ತಾಂಡ ಸೇಡಂ ಶಹರ
ತಾಃ ಸೇಡಂ, ಜಿಃ ಕಲಬುರಗಿ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 11-01-2018ರಂದು 08.00 ಎ. ಎಮ್. ಗಂಟೆ ಸುಮಾರಿಗೆ ಸೇಡಂ ಸರ್ಕಲ್ನಲ್ಲಿ ಜಮೆಯಲ್ಲಿರುವ ಅಬಕಾರಿ ಇಲಾಖೆ ಸಿಬ್ಬಂದಿ ಹಾಗೂ ಪಂಚರು ಕೂಡಿಕೊಂಡು ಸೇಡಂ ಶಹರದ ಹಾಜಿ ಸರವಾರ ತಾಂಡಾದಲ್ಲಿರುವ ಆರೋಪಿತಳ ಮನೆಯಲ್ಲಿ ಅಬಕಾರಿ ದಾಳಿ ಮಾಡಿದಾಗ ಆರೋಪಿತರು ಅಕ್ರಮವಾಗಿ ಕಲಬೇರಿಕೆ ಸೇಂದಿ ಮಾರಾಟ/ಸಾಗಾಣಿಕೆ ಮಾಡುವ ಉದ್ದೇಶದಿಂದ ಮನೆಯಲ್ಲಿ ಶೇಖರಣೆ ಮಾಡಿಕೊಂಡಿರುವುದು ಕಂಡುಬಂದಿದ್ದು ಮತ್ತು ಸದರಿ ಸೇಂದಿಯನ್ನು ಜಪ್ತಿ ಪಡಿಸಿಕೊಂಡಿದ್ದು, ಸದರಿ ಸೇಂದಿಯನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಮಾನವ ಸೇವನೆಗೆ ಯೋಗ್ಯವಲ್ಲದ ಸೇಂದಿ ಎಂದು ವರದಿ ಬಂದಿದ್ದು, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(A) ಮತ್ತು 43 ಹಾಗೂ ಭಾ. ದಂ. ಸಂಹಿತೆ ಕಲಂ 273ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 01-08-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.188/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಅಬಕಾರಿ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿ ನಂ.1ಃ- ಲಕ್ಷ್ಮೀ ಗಂಡ ರಾಜು ರಾಠೋಡ
ವಃ 30 ವರ್ಷ, ಉಃ ---
ಸಾಃ ಹಾಜಿ ಸರವಾರ ತಾಂಡ ಸೇಡಂ ಶಹರ,
ತಾಃ ಸೇಡಂ, ಜಿಃ ಕಲಬುರಗಿ ಹಾಗೂ ಇನ್ನೊಬ್ಬರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 01-08-2025 ಪ್ರ.ದ.ನ್ಯಾ.ದಂ. ಸೇಡಂ.